ದಿ: 11.06.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 940/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶರಣಪ್ಪ | ಪ್ರಾ ಸಾ:1 |
| ತಂದೆಯ/ಗಂಡನ ಹೆಸರು | : | ಕರಿಯಪ್ಪ | ಚಾಸಾ:1 |
| ವಯಸ್ಸು | : | 75 ವರ್ಷ | |
| ಕೆಲಸ | : | ನಿವೃತ್ತ ಶಿಕ್ಷಕರು | ಸಾ ಪ್ರ ಬೋ |
| ವಾಸ | : | ದುಮ್ಮಿ ಗ್ರಾಮ | ದಿ:11.06.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ತಮ್ಮ. ನ್ಯಾಯಾಲಯದಲ್ಲಿ ಗೈರುಹಾಜರಾಗಿರುವ 2 ನೇ ಆರೋಪಿ ನನ್ನ ತಮ್ಮನಾದ 1 ನೇ ಆರೋಪಿತನ ಪತ್ನಿ ಮತ್ತು 3 ನೇ ಆರೋಪಿ ನನ್ನ ಮತ್ತೊಬ್ಬ ತಮ್ಮ. ದಿನಾಂಕ 12.06.2022 ರಂದು ಮದ್ಯಾಹ್ನ 2 ಗಂಟೆಯ ಸಮಯದಲ್ಲಿ ನಾನು ನಮ್ಮ ಗ್ರಾಮದ ನನಗೆ ಸೇರಿದ ಸ.ನಂ.34/2 ಎ ಜಮೀನಿನಲ್ಲಿ ಇದ್ದೆನು. ಆಗ 1 ನೇ ಆರೋಪಿ ನಮ್ಮ ಜಮೀನಿನಲ್ಲಿ ಇದ್ದ ಮೈನ್ಸ್ ವೈರ್‌ನ್ನು ಕಟ್ ಮಾಡಲು ಬಂದನು. ಆಗ ನಾನು 1 ನೇ ಆರೋಪಿಗೆ ಏಕೆ ವೈರನ್ನು ಕಟ್ಟು ಮಾಡುತ್ತಿದ್ದೀಯ ಎಂದು ಕೇಳಿದೆನ. ಆಗ 1 ನೇ ಆರೋಪಿ ನನಗೆ ಕೆಟ್ಟ ಮಾತುಗಳಿಂದ ಬೈದರು. 1 ನೇ ಆರೋಪಿ ನನಗೆ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾರೆ. 1 ನೇ ಆರೋಪಿ ನನಗೆ ನಿನ್ನ ಜೀವ ತೆಗೆಯುತ್ತೇನೆ ಎಂದು ಹೇಳಿದರು. 2 ಮತ್ತು 3 ನೇ ಆರೋಪಿತರು ಸಹ ನನಗೆ ಜೀವ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿದರು. ಆಗ ಚಾಸಾ.4 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ಗಲಾಟೆ ಬಿಡಿಸಲು ಬಂದಾಗ 1 ನೇ ಆರೋಪಿ ಚಾಸಾ.4 ರವರಿಗೆ ಕೋಲಿನಿಂದ ಹೊಡೆದಿರುತ್ತಾರೆ. ನಂತರ ನಾನು ಮತ್ತು ಚಾಸಾ.4 ರವರು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಹೇಳೀಕೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲು ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

ದಿ: 11.06.2026

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ಗಲಾಟೆ ದಿನಾಂಕ 12.06.2022 ರಂದು ಮದ್ಯಾಹ್ನ 3.30 ರ ಸಮಯದಲ್ಲಿ ನಡೆದಿರುತ್ತದೆ ಎಂದರೆ ಸರಿ. 1 ನೇ ಆರೋಪಿ ನನಗೆ ಕೈ ಮತ್ತು ಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಸಹ ಕೈ ಮತ್ತು ಕಾಲುಗಳಿಂದ ನನ್ನ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. 1 ಮತ್ತು 3 ನೇ ಆರೋಪಿತರು ಚಾಸಾ.4 ರವರಿಗೆ ಕೈ ಮತ್ತು ಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಎಸ್.ವಿ. ವಕೀಲರಿಂದಃ**

ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ರೂ.250/- ಖರ್ಚಿನೊಂದಿಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊಳಲ್ಕೆರೆ